ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ನಿಮ್ಮ ಕರಾವಳಿ ಭಾಗದ
ಹೆಚ್ಚೆಚ್ಚು ಸುದ್ದಿಗಳ ಮಿಂಚಿನ ವೇಗದ ಬ್ರೇಕಿಂಗ್ ಅಪ್‌ಡೇಟ್‌ಗಳು
ಇದೀಗ ನಿಮ್ಮ ಬೆರಳತುದಿಯಲ್ಲಿ!
ನಮ್ಮ ನ್ಯೂಸ್ ಆ್ಯಪ್ ಅನ್ನು
ಇಂದೇ ಡೌನ್‌ಲೋಡ್ ಮಾಡಿಕೊಳ್ಳಿ!
udayavani.com

ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2018-20 | udayavani.com | UDAYAVANI – KANNADA DAILY – MANIPAL ಮಣಿಪಾಲ, ಮಂಗಳವಾರ, ಜುಲೈ 24, 2018 ಬೆಲೆ: ₹ 5-00 ವಿದೇಶ ಬೆಲೆ: ₹ 6-00

# ಸಿಇಟಿ 2ನೇ ಸುತ್ತಿನ ಸೀಟು ಹಂಚಿಕೆ ವೇಳಾಪಟ್ಟಿ ಪ್ರಕಟ

**ಬೆಂಗಳೂರು, ಜು. 23: ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ ಮೊದಲಾದ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಸಿಇಟಿ-2018ನೇ ಸಾಲಿನ ಎರಡನೇ ಸುತ್ತಿನ ಸೀಟು ಹಂಚಿಕೆ ವೇಳಾಪಟ್ಟಿ ಪ್ರಕಟಿಸಲಾಗಿದೆ.**

ಜು.25ರಿಂದ28ರವರೆಗೆ ಅರ್ಹ ಅಭ್ಯರ್ಥಿಗಳು ಇಚ್ಛೆ ಅಥವಾ ಆಯ್ಕೆಯ ಮಾರ್ಪಾಡು ಮಾಡಲು ಅವಕಾಶ ಇದೆ. ಸೀಟು ಹಂಚಿಕೆಯ ಫಲಿತಾಂಶವನ್ನು ಜು.30ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಮಾಹಿತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನೋಡಬಹುದು.

ಸೀಟು ಹಂಚಿಕೆಯ ಅನಂತರ ಅಭ್ಯರ್ಥಿಗಳಿಗೆ ನಾಲ್ಕು ಚಾಯ್ಸ್ ನೀಡಲಾಗುತ್ತದೆ. ಯಾವುದಾದರೂ ಒಂದು ಚಾಯ್ಸ್ ಆಯ್ಕೆ ಮಾಡುವ ಮೊದಲು ಅದರಿಂದಾಗುವ ಪರಿಣಾಮದ ಬಗ್ಗೆ ಅರಿತುಕೊಳ್ಳುವಂತೆ ಪ್ರಾಧಿಕಾರ ಅಭ್ಯರ್ಥಿಗಳಿಗೆ ನಿರ್ದೇಶಿಸಿದೆ.

ಚಾಯ್ಸ್ 1 ಅಥವಾ ಚಾಯ್ಸ್ 2 ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳು ಶುಲ್ಕ ಪಾವತಿ ಮಾಡಬೇಕು. ಚಾಯ್ಸ್ 1 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಸಂಬಂಧಪಟ್ಟ ಕಾಲೇಜಿನ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಆಗಸ್ಟ್ 4ರೊಳಗೆ ಕಾಲೇಜಿಗೆ ಸೇರಿಕೊಳ್ಳಬೇಕು ಎಂದು ಪ್ರಾಧಿಕಾರ ಸೂಚಿಸಿದೆ.

DH
DECCAN HERALD
Tuesday July 24, 2018
www.deccanherald.com



# 'Study leave for PhD will not be counted as teaching experience'

Prakash Kumar

**NEW DELHI:** An in-service university or college teacher will have to complete their PhD without taking any leave from regular teaching assignments in order to get the time spent on pursing the research degree counted as teaching experience both for the purpose of promotion or appointment.

The University Grants Commission (UGC) has brought in this new provision in its revised regulations on minimum qualifications for appointment of teachers and other academic staff in universities and colleges and other measures for the maintenance of standards in higher education.

The introduction of this new provision, however, drew objections from prominent university and teachers bodies including All India Federation of University and College Teachers' Organisations (AIFUCTO).Rajib Ray, the Federation of the Central Universities' Teachers Association's (FEDCUTA) president, called the provision as "highly retrograde," demanding for its "immediate" withdrawal from the regulations notified in an official gazette on July 18.

The AIFUCTO's secretary Arun Kumar also disapproved the introduction of this new provision in the UGC regulations, calling it as "unfair" to the in-service faculty.

"The time taken by candidates to acquire MPhil and/or PhD degree shall not be considered as teaching/ research experience to be claimed for appointment to the teaching positions," stipulates the UGC ((Minimum Qualifications for Appointment of Teachers and other Academic Staff in Universities and Colleges and other Measures for the Maintenance of Standards in Higher Education) Regulations, 2018.

Further, the period of active service spent on pursuing research degree "simultaneously" with teaching assignment without taking "any kind of leave", shall be counted as teaching experience for the purpose of direct recruitment/promotion, it also clarifies.

This provision will adversely affect, particularly those recruited as assistant professors in the universities and colleges based on their scores in the National Eligibility Test (NET), conducted under the aegis of the UGC, or in the similar eligibility tests conducted under the jurisdiction of the State governments, AIFUCTO secretary said.

"UGC must withdraw this provision from its regulations," he added.

As per the revised regulations, a maximum 20% of the total regular faculty strength can be allowed to go on study leave for pursuing PhD.

**DH News Service**



ಮಕ್ಕಳ ಅತ್ಯಾಚಾರಿಗಳಿಗೆ ಇನ್ನು ಗಲ್ಲು ಶಿಕ್ಷೆ ▸ 9

ಸುಸ್ತಿ ಸಾಲ ವಿರುದ್ಧ ಬ್ಯಾಂಕ್ ಸಮರ: ಐಸಿಎಗೆ 85 ಹಣಕಾಸು ಸಂಸ್ಥೆಗಳ ಸಹಿ ▸ 10

ಕೆ.ಬಿ.ಕೋಳಿವಾಡ, ಕೆ.ಎನ್.ರಾಜಣ್ಣಗೆ ಕಾಂಗ್ರೆಸ್ ನೋಟಿಸ್ 5 ◂

9 ◂ ಉಗಾಂಡಾದ ಹಳ್ಳಿಗೆ 200 ಹಸು ಕೊಡುಗೆ

ಮಂಗಳೂರು
ಮಂಗಳವಾರ
24 ಜುಲೈ 2018
ವಿಲಂಬಿ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲಪಕ್ಷ, ತಿಥಿ: ದ್ವಾದಶಿ ನಕ್ಷತ್ರ : ಜ್ಯೇಷ್ಠೆ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ


### ಕೇಂದ್ರ ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಸ್ವಯಂ ವೆಬ್‌ಸೈಟ್

## ಮನೆಯಲ್ಲೇ 'ಸ್ವಯಂ' ಕಲಿಯಿರಿ!

ಜನರ ಕರೆಗಳಿಗೆ ಓಗೊಡುವುದರೊಂದಿಗೆ, ಅವರ ಸಮಸ್ಯೆಗಳನ್ನು ಪರಿಹರಿಸುವುದರೊಂದಿಗೆ ಹೊಸ ಹೊಸ ಪ್ರಯತ್ನಗಳನ್ನು ಮಾಡುವುದಕ್ಕೂ ಮೋದಿ ಸರ್ಕಾರ ಎತ್ತಿದ ಕೈ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಎಲ್ಲರಿಗೂ ಕಲಿಯುವ ಮತ್ತು ಕಲಿಸುವ ಅತ್ಯುತ್ತಮ ಸಂಪನ್ಮೂಲಗಳನ್ನು ಕೊಡುವ ನಿಟ್ಟಿನಲ್ಲಿ 2017ರ ಜು 8ರಂದು ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ 'ಸ್ವಯಂ' (swayam.gov.in) ಎಂಬ ಅಂತರ್ಜಾಲವನ್ನು ಉದ್ಘಾಟಿಸಿದ್ದರು. ▸4



### ಕಾರ್ಯ ನಿರ್ವಹಣೆ ಹೇಗೆ?

9ನೇ ತರಗತಿಯಿಂದ ಸ್ನಾತಕೊತ್ತರ ಪದವಿವರೆಗೂ ತರಗತಿಗಳಲ್ಲಿ ಏನು ಪಾಠ ಮಾಡುತ್ತಾರೋ ಅವೆಲ್ಲವನ್ನೂ ಸ್ವಯಂ ಜಾಲತಾಣ ವೇದಿಕೆಯಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಇದನ್ನು ಯಾರು ಬೇಕಾದರೂ, ಯಾವ ಸಮಯದಲ್ಲಾದರೂ, ಎಲ್ಲಿಂದ ಬೇಕಾದರೂ ನೋಡಬಹುದು.

### ಉದ್ದೇಶವೇನು?

ದೇಶದಲ್ಲಿರುವ ಅತ್ಯುತ್ತಮ ಶಿಕ್ಷಕರಿಂದ ಭಾರತದಲ್ಲಿರುವ ಮಕ್ಕಳು ಉಚಿತವಾಗಿ ಪಾಠ ಕಲಿಯಲಿ ಎಂಬುದೇ ಇದರ ಉದ್ದೇಶ. ಈ ಸ್ವಯಂ ಕೋರ್ಸ್‌ಗಳನ್ನು ತಯಾರು ಮಾಡುವುದಕ್ಕೆ 1000ಕ್ಕೂ ಹೆಚ್ಚು ನುರಿತ ತಜ್ಞರನ್ನು ಆಯ್ಕೆ ಮಾಡಲಾಗಿದೆ. ಹಾಗೂ ಇವರು ಯಾವ್ಯಾವ ವಿಷಯಗಳು ಇರಬೇಕು ಎಂಬುದನ್ನು ನಿರ್ಧರಿಸುತ್ತಾರೆ. ಎಲ್ಲ ಬಡಮಕ್ಕಳೂ ಕಲಿಯಲಿ ಎಂಬುದೇ ಇದರ ಉದ್ದೇಶ.

### ಭಾಷೆಗಳು

ಸದ್ಯಕ್ಕೆ ಸ್ವಯಂ ಸೇವೆಯು ಆಂಗ್ಲ, ಹಿಂದಿ ಭಾಷೆಯಲ್ಲಿ ಲಭ್ಯವಿದ್ದು ಭಾರತದ ಇನ್ನಷ್ಟು ಭಾಷೆಗಳಲ್ಲಿ ಸೇವೆ ನೀಡಲು ಸ್ವಯಂ ಉತ್ಸಾಹದಲ್ಲಿದೆ.

## ಮನೆಯಲ್ಲೇ 'ಸ್ವಯಂ' ಕಲಿಯಿರಿ!

1▸ ಇದು ಆಗ ಬಹಳ ಆರಂಭಿಕ ಹಂತದಲ್ಲಿದ್ದು ಕಲಿಯುವವರು ಮತ್ತು ಕಲಿಸುವವರು ಹೆಚ್ಚಾಗಿ ಸಿಗುತ್ತಿರಲಿಲ್ಲ . ಆದರೆ ಈಗ ಇದರ ಗಾತ್ರ ಹೆಚ್ಚಾಗಿದೆ. ಪಾಠ ಮಾಡುವವರು ಮತ್ತು ಕಲಿಯುವವರ ಸಂಖ್ಯೆಯೂ ಹೆಚ್ಚಾಗಿದೆ. ಒಟ್ಟಾರೆ ಎಲ್ಲಿರುತ್ತೇವೋ ಅಲ್ಲಿಂದಲೇ ಕಲಿಸುವುದು ಹಾಗೂ ಕಲಿಯುವುದು ಈ ಜಾಲತಾಣದ ಉದ್ದೇಶವಾಗಿದೆ. ಹಾಗಾದರೆ, ಇಲ್ಲಿ ಯಾವ್ಯಾವ ವಿಷಯಗಳನ್ನು ಪಾಠ ಮಾಡುತ್ತಾರೆ. ಇದರಲ್ಲಿ ನೋಂದಾಯಿಸಿಕೊಳ್ಳುವುದು ಹೇಗೆ? ಇತ್ಯಾದಿ ಮಾಹಿತಿಗಳು ಇಲ್ಲಿವೆ.

### ಯಾವ್ಯಾವ ವಿಷಯಗಳು?

ಸ್ವಯಂ ಜಾಲತಾಣದಲ್ಲಿ ಕೋರ್ಸ್‌ಗಳು ನಾಲ್ಕು ವಿಭಾಗಗಳಲ್ಲಿ ಲಭ್ಯವಿದೆ.

- ವಿಡಿಯೋ ಪಾಠ
- ವಿಶೇಷವಾಗಿ ತಯಾರಿಸಲಾದ ಓದುವ ಸಾಮಾಗ್ರಿಗಳು
- ನಮ್ಮನ್ನು ನಾವು ಪರೀಕ್ಷಿಸಿಕೊಳ್ಳುವುದಕ್ಕೆ ಟೆಸ್ಟ್‌ಗಳು ಮತ್ತು ಪಝಲ್‌ಗಳು
- ಪಠ್ಯಗಳ ಸಂಶಯಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಚರ್ಚಾ ಘಟಕಗಳು.



**ಕಲಿಕಾ ಸಹಯೋಗ** : ಸರ್ಕಾರದ ಉದ್ದೇಶ ಅತ್ಯುತ್ತಮ ಕಲಿಕೆಯನ್ನು ಒದಗಿಸಿಕೊಡುವುದು. ಅದಕ್ಕಾಗಿ ಕೆಲವರಿಗೆ ಕೆಲ ಉಸ್ತುವಾರಿಗಳನ್ನೂ ಕೊಟ್ಟಿದ್ದಾರೆ. ಎಂಜಿನಿಯರಿಂಗ್ ವಿಭಾಗವನ್ನು ಎನ್‌ಪಿಟಿಇಎಲ್, ಸ್ನಾತಕೋತ್ತರ ಪದವಿ ವಿಭಾಗವನ್ನು ಯುಜಿಸಿ, ಪದವಿಗಿಂತಲೂ ಕೆಳಗಿನ ಭಾಗವನ್ನು ಸಿಇಸಿ, ಶಾಲೆಯ ಮಕ್ಕಳಿಗಾಗಿ ಎನ್‌ಸಿಇಆರ್‌ಟಿ, ದೂರ ಶಿಕ್ಷಣವನ್ನು ಇಗ್ನೋ ನೋಡಿಕೊಳ್ಳುತ್ತದೆ. ಹಾಗೂ ಮ್ಯಾನೇಜ್ಮೆಂಟಲ್ ಅಭ್ಯಾಸಗಳ ಉಸ್ತುವಾರಿ ಐಐಎಂಬಿ ಅವರದ್ದಾಗಿದೆ.

**ದರ ಎಷ್ಟು?** : ಈ ಸ್ವಯಂ ಜಾಲತಾಣಕ್ಕೆ ವಿಶೇಷತೆಯಿದೆ. ಇದು ಬೇರೆ ಆ್ಯಪ್‌ಗಳಂತೆ ಮುಂದೆ ಹೋಗುತ್ತಾ ಹೋಗುತ್ತಾ ಹಣ ಕೇಳುವುದಿಲ್ಲ, ಸತ್ಯಾಂಶವೇನೆಂದರೆ, ಈ ಜಾಲತಾಣ ಒಂದು ರುಪಾಯಿ ಸಹ ಕೇಳುವುದಿಲ್ಲ, ಕೇಳಲೂಬಾರದು. ಯಾಕೆಂದರೆ, ಕಲಿಯುವವರಿಗೆ ಇದು ಸಂಪೂರ್ಣ ಉಚಿತ.

**ಪ್ರಮಾಣಪತ್ರ** : ಸ್ವಯಂ ಪ್ರಮಾಣ ಪತ್ರಗಳು ಬೇಕೆಂದಿದ್ದರೆ, ಸ್ವಯಂ ಜಾಲತಾಣದಲ್ಲಿ ಕೋರ್ಸ್ ಶುರು ಮಾಡುವುದಕ್ಕೂ ಮುನ್ನ ನೋಂದಾಯಿಸಿಕೊಳ್ಳಬೇಕು. ನಂತರ ಆಯ್ಕೆ ಮಾಡಿಕೊಂಡಿರುವ ಕೋರ್ಸ್ ಮುಗಿದ ಮೇಲೆ ಒಂದು ಪ್ರಮಾಣಪತ್ರವನ್ನೂ ನೀಡುತ್ತಾರೆ. ಆದರೆ ಪ್ರಮಾಣಪತ್ರ ತೆಗೆದುಕೊಳ್ಳುವಾಗ ಮಾತ್ರ ಬಹಳ ಕಡಿಮೆ ಮೊತ್ತವನ್ನು ಪಾವತಿಸಬೇಕು.

**ಅಂಕ/ಗ್ರೇಡ್‌ಗಳ ವರ್ಗಾವಣೆ** : ಇದು ಬಹಳ ವಿಚಿತ್ರ ಎನಿಸಿದರು ಅಷ್ಟೇ ಸತ್ಯ. ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಒಂದು ದಿನವೂ ಬಿಡದೇ ಕಲಿತು ಪರೀಕ್ಷೆ ತೆಗೆದುಕೊಂಡರೆ, ಕೋರ್ಸ್‌ನ . ಅಂತ್ಯದಲ್ಲಿ ಕೊಡುವ ಅಂಕ ಅಥವಾ ಗ್ರೇಡ್‌ಗಳನ್ನು ನಮ್ಮ ಎಂದಿನ ಅಕಾಡೆಮಿಕ್ ರೆಕಾರ್ಡ್‌ಗಳಿಗೂ ವರ್ಗಾಯಿಸಬಹುದಾಗಿದೆ. ಇದಕ್ಕಾಗಿ ಯುಜಿಸಿ ರೆಗ್ಯುಲೇಷನ್ 2016(Credit Framework for online learning courses through Swayam)ರ ಅನ್ವಯ, ಸ್ವಯಂನಲ್ಲಿ ತೆಗೆದುಕೊಂಡಿರುವ ಅಂಕಗಳನ್ನು ಮಾನ್ಯ ಮಾಡಿ, ಅಕಡೆಮಿಕ್ ರೆಕಾರ್ಡ್‌ನಲ್ಲಿ ಸೇರಿಸಿಕೊಳ್ಳುವುದಕ್ಕೆ ಎಲ್ಲ ವಿವಿಗಳಿಗೂ ಯುಜಿಸಿ ಆದೇಶ ನೀಡಿದೆ.

- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
- ಬೆಂಗಳೂರು ವಿಶ್ವವಿದ್ಯಾಲಯ
- ಮೈಸೂರು ವಿಶ್ವವಿದ್ಯಾಲಯ
- ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
- ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
- ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
- ಉತ್ತರಾಖಂಡ ಆಯುರ್ವೇದ ವಿಶ್ವವಿದ್ಯಾಲಯ
- ಧಾರವಾಡ ಕೃಷಿ ವಿಶ್ವವಿದ್ಯಾಲಯ
- ತುಮಕೂರು ವಿಶ್ವವಿದ್ಯಾಲಯ
- ಬಾಗಲಕೋಟೆಯ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ
- ರಾಜೀವ್ ಗಾಂಧಿ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ
- ಎಐಐಎಮ್‌ಎಸ್ ದೆಹಲಿ
- ಆ್ಯಮಿಟಿ ವಿಶ್ವವಿದ್ಯಾಲಯ
- ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ
- ಬನಾರಸ್ ಹಿಂದೂ ವಿಶ್ವವಿದ್ಯಾಲಯ

**ಸ್ವಯಂ ವೇದಿಕೆಯ ನಿರ್ಮಾಣ:** ವಿದ್ಯಾರ್ಥಿಗಳಿಗೆ ಉಚಿತವಾಗಿ ಪಾಠ ಮಾಡುವ ಈ ಸ್ವಯಂ ಜಾಲತಾಣವನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಮತ್ತು ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಸ್ಟಡೀಸ್‌ನವರು ಮೈಕ್ರೋಸಾಫ್ಟ್‌ನ ಸಹಯೋಗದೊಂದಿಗೆ ನಿರ್ಮಿಸಿ ಅಭಿವೃದ್ಧಿಪಡಿಸಿದ್ದಾರೆ.

**ಒಟ್ಟು ಕೋರ್ಸ್‌ಗಳು** : ಎಂಜಿನಿಯರಿಂಗ್, ಕಲಾ ಮತ್ತು ರಿಕ್ರಿಯೇಷನ್, ವಿಜ್ಞಾನ, ಸಾಮಾಜಿಕ ಜ್ಞಾನ, ಕಾನೂನು, ಗ್ರಂಥಾಲಯ ಮತ್ತು ಇನ್ಫರ್ಮೇಷನ್ ಸೈನ್ಸ್, ಗಣಿತ, ಭಾಷೆಗಳು, ಮ್ಯಾನೇಜ್ಮೆಂಟ್, ಕಲೆ, ಕಾಮರ್ಸ್ ಇಷ್ಟು ಪ್ರಮುಖ ಕೋರ್ಸ್‌ಗಳನ್ನು ಸದ್ಯಕ್ಕೆ ಹೇಳಿಕೊಡಲಾಗುತ್ತಿದೆ. ಇದರ ಜತೆಗೆ ಇನ್ನೂ 2000 ಕೋರ್ಸ್‌ಗಳ 8 ಲಕ್ಷ ತಾಸುಗಳ ಪಾಠಗಳ ಈಗಾಗಲೇ ಲಭ್ಯವಿದೆ. ಆದರೆ ಇದರಲ್ಲಿ ಹೆಚ್ಚು ಎಂಜಿನಿಯರಿಂಗ್ ಸಂಬಂಧಿತ ಕೋರ್ಸ್‌ಗಳೇ ಇವೆ. ಆದರೂ 9ನೇ ತರಗತಿಯ ಮಕ್ಕಳಿಂದ, ಸ್ನಾತಕೋತ್ತರ ಪದವಿಯವರೆಗೆ ಎಲ್ಲ ಪಾಠಗಳೂ ನಡೆಯುತ್ತವೆ.

**ಯಾವ್ಯಾವ ವಿವಿಗಳಿವೆ?** : ಸ್ವಯಂ ಯಶಸ್ವಿಯಾಗಬೇಕಾದರೆ ಅದು ಒಬ್ಬರಿಂದ ಅಥವಾ ಒಂದು ಸರ್ಕಾರದಿಂದ ಸಾಧ್ಯವಿಲ್ಲ, ಬದಲಿಗೆ ಅವರಿಗೆ ಸಹಾಯ ಮಾಡಬೇಕಾಗಿರುವುದು ವಿವಿಗಳು. ವಿಶ್ವವಿದ್ಯಾಲಯಗಳ ಬೆಂಬಲವಿಲ್ಲದೇ ಏನನ್ನೂ ಮಾಡಲಾವುದಿಲ್ಲ, ಅಂಕಗಳು ಮತ್ತು ಗ್ರೇಡ್‌ಗಳನ್ನು ವರ್ಗಾಯಿಸುವುದಕ್ಕಾಗಲಿ, ಪಾಠಗಳನ್ನು ರೆಕಾರ್ಡ್ ಮಾಡುವುದಕ್ಕಾಗಲಿ ವಿವಿಗಳ ಪಾತ್ರ ಅಮೂಲ್ಯ.

ಇವಿಷ್ಟು ಸೇರಿದಂತೆ ಸರಿಸುಮಾರು 700 ವಿವಿಗಳ ಬೆಂಬಲದೊಂದಿಗೆ ಸ್ವಯಂ ನಡೆಯುತ್ತಿದೆ.